ಆ) ಹಾಗಿದ್ದಲ್ಲಿ ಉಳಿದ ಗ್ರಾಮಗಳಿಗೆ ಯಾವಾಗ ವಿದ್ಯುತ್ ಒದಗಿಸಲಾಗುವುದು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ೨೦೦ ಗ್ರಾಮಗಳ ಪೈಕಿ ೧೯೯ ಗ್ರಾಮಗಳು, ೬೩ ಉಪಗ್ರಾಮಗಳ ಪೈಕಿ ೪೪ ಉಪ ಗ್ರಾಮಗಳು ೩೧-೧೦-೧೯೮೭ರ ವರೆಗೆ ವಿದ್ಯುದ್ದೀಕರಣಗೊಂಡಿವೆ.

ಆ) ಉಳಿದಿರುವ ಒಂದು ಗ್ರಾಮ ಜನ ರಹಿತವಾಗಿದೆ. ಉಳಿದಿರುವ ಉಪ ಗ್ರಾಮಗಳ ವಿದ್ಯುದ್ದೀಕರಣವನ್ನು ಬರುವ ವರ್ಷಗಳಲ್ಲಿ ಆರ್ಥಿಕ ಲಭ್ಯತೆಯನ್ನಾ ಧರಿಸಿ ತೆಗೆದುಕೊಳ್ಳಲಾಗುವುದು

ಚಿಂಚೋಳಿ ತಾಲ್ಲೂಕಿಗೆ ಬೇಕಾಗುವ ವಿದ್ಯುಚ್ಛಕ್ತಿಯ ಬಗ್ಗೆ

೧೧೫೬ (ಡಿ) ಶ್ರೀ ಎಂ. ವೀರಯ್ಯ ಸ್ವಾಮಿ(ಚಿಂಚೋಳಿ) ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂಚೋಳಿ ತಾಲ್ಲೂಕಿನ ಒಟ್ಟು ವಿದ್ಯುತ್ ಬೇಡಿಕೆ ಏನು,

ಆ) ಚಿಂಚೋಳಿ ತಾಲ್ಲೂಕಿನ ರಟ್ಟಿಲ್ ಗ್ರಾಮದಲ್ಲಿ ಒಂದು ೫೫ ಕೆ. ವಿ. ಸಾಮರ್ಥ್ಯದ ಮಾಸ್ಟರ್ ಯೂನಿಟ್ ಸಬ್ ಸ್ಟೇಷನ್ ಮಂಜೂರಾಗಿರುವುದು ವಾಸ್ತವವೇ, ಹಾಗಿದ್ದಲ್ಲಿ ಇದು ಯಾವ ತಾರೀಖಿನಲ್ಲಿ ಮಂಜೂರಾಯಿತು.

ಇ) ಇದನ್ನು ಯಾವಾಗ ಸ್ಥಾಪಿಸಲಾಗುವುದು,

ಈ) ಚಿಂಚೋಳಿಯಲ್ಲಿ ಮತ್ತೊಂದು ಎಂ. ಯು. ಎಸ್. ಎಸ್. ಸ್ಥಾಪಿಸುವ ಪ್ರಸ್ತಾವ ವಿದೆಯೇ.

ಉ) ಹಾಗಿದ್ದಲ್ಲಿ ಅದನ್ನು ಯಾವಾಗ ಮತ್ತು ಎಲ್ಲಿ ಸ್ಥಾಪಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಗರಿಷ್ಠ ವಿದ್ಯುತ್ ಬೇಡಿಕೆ ಸುಮಾರು ೪೦೦೦ ಕಿಲೋವ್ಯಾಟ್‌ಗಳು,

ಆ) ೨೦-೮-೧೯೮೨ ರಲ್ಲಿ ರಟ್ಟಿಲ್ ಗ್ರಾಮದಲ್ಲಿ ೫೫ ಕೆ. ವಿ. ಯ. ವಿದ್ಯುತ್ ಉಪಕೇಂದ್ರ ಮಂಜೂರು ಆಗಿದೆ

ಇ) ಕಾರ್ಯ ಪ್ರಗತಿಯಲ್ಲಿದೆ. ೫-೪ ತಿಂಗಳಲ್ಲಿ ಈ ಕೇಂದ್ರ ಕಾರ್ಯರಂಭಗೊಳ್ಳುವ ನಿರೀಕ್ಷೆ ಇದೆ.

ಈ) ಇಲ್ಲ,

ಉ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಇಪ್ಪತ್ತೈದನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ. ಇದರ ಜೊತೆಗೆ ಇಪ್ಪತ್ತೂರು ಮತ್ತು ಇಪ್ಪತ್ತನ್ನಲ್ಕನೇ ಪಟ್ಟಿಯನ್ನೂ ಕೂಡ ಸಭೆಯ ಮುಂದಿಡುತ್ತೇನೆ,

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಗಳನ್ನು ಸಭೆಯ ಮುಂದಿಡಲಾಗಿದೆ. ಇಲ್ಲಿಗೆ ಕೊಶ್ಚನ್ ಹವರ್ ಮುಗಿಯಿತು.